**ಸಾಕ್ಷಿಗೆ ದಿನಾಂಕ:01-08-24 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರ: ಶ್ರೀ. ಕೆ ಆರ್ ಎಸ್ ವಕೀಲರಿಂದ :**

ಶೇಖ್ ಅಹಮದ್ ಸಂಬಂಧ ದಲ್ಲಿ ನನಗೆ ದೊಡ್ಡಪ್ಪ ಆಗಬೇಕು. ಶೇಖ್ ಅಹಮದ್ ರವರು ಯಾವ ಇಸವಿಯಲ್ಲಿ ತೀರಿಹೋಗಿರುತ್ತಾರೆಂದು ನನಗೆ ಈಗ ನೆನಪಿಲ್ಲ. ಶೇಖ್ ಅಹಮದ್ ರವರ ಮೊದಲನೇ ಹೆಂಡತಿಯ ಹೆಸರು ಶಕೀಲಾಬೀ ಆಗಿರುತ್ತದೆ ಎಂದರೆ ಸರಿ. ಶೇಖ್ ಅಹಮದ್ ರವರ ಎರಡನೇ ಹೆಂಡತಿಯ ಹೆಸರು ರಮ್ಲತ್ ಆಗಿರುತ್ತದೆ ಎಂದರೆ ಸರಿ. ಸದರಿ ಶಕೀಲಾಬೀ ಹಾಗೂ ರಮ್ಲತ್ ರವರು ಇವತ್ತಿಗೂ ಸಹ ಜೀವಂತವಾಗಿರುತ್ತಾರೆ ಎಂದರೆ ಸರಿ. ಶಕೀಲಾಬೀ ಎಂಬುವವರಿಗೆ ಮಕ್ಕಳು ಇರಲಿಲ್ಲ ಎನ್ನುವ ಕಾರಣದಿಂದ ಶೇಖ್ ಅಹಮದ್ ರವರು ರಮ್ಲತ್ ರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಶಕೀಲಾಬೀ ರವರಿಗೆ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಶಬೀನಾ ರವರು ಶಕೀಲಾಬೀ ರವರ ಮಗಳು ಆಗಿರುತ್ತಾರೆ ಎಂದರೆ ಸರಿ. ಸದರಿ ಶಬೀನಾ ರವರು ಶಕೀಲಾಬಿ ರವರ ಮಗಳು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಶಬೀನಾ ರವರು ಶೇಖ್ ಅಹಮದ್ ರವರ ಸಾಕು ಮಗಳಾಗಿರುತ್ತಾಳೆ ಹೊರತು ನಾನು ಹೇಳುವಂತೆ ಅವಳು ಶೇಖ್ ಅಹಮದ್ ಹಾಗೂ ಶಕೀಲಾಬಿ ರವರ ಸ್ವಂತ ಮಗಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

2. ಶಬೀನಾ ರವರು ದಿನೇಶ್ ಎಂಬುವವರನ್ನು ಮದುವೆಯಾಗಿರುವ ವಿಚಾರ ನನಗೆ ಗೊತ್ತಿದೆ. ಪ್ರಸ್ತುತ ಸದರಿ ಶಬೀನಾ ರವರ ಗಂಡ ದಿನೇಶ್ ರವರ ಮನೆಯಲ್ಲಿ ವಾಸವಾಗಿರುತ್ತಾರೆ ಎಂಬ ವಿಷಯ ನನಗೆ ಗೊತ್ತಿದೆ. ಈ ದಾವೆಯ ಪ್ರತಿವಾದಿ 1(ಜಿ) ಹಾಗೂ 1(ಹೆಚ್) ರವರಾದ ಪೌಜಿಯಾ ಹಾಗೂ ಸಾಜಿಯಾ ರವರು ನನ್ನ ಸಹೋದರಿಯರು ಎಂದರೆ ಸರಿ. ಸದರಿಯವರಿಗೆ ಮದುವೆಯಾಗಿದ್ದು, ಅವರು ಅವರವರ ಗಂಡಂದಿರ ಮನೆಗಳಲ್ಲಿ ಪ್ರಸ್ತುತದಲ್ಲಿ ವಾಸವಿರುತ್ತಾರೆ.

3. ಕೈರುನ್ನೀಸಾ ರವರು ನನ್ನ ತಾಯಿ ಆಗಿರುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಗಳ ಪರ ಕೈರುನ್ನೀಸಾ ರವರು ತಕರಾರು ಸಲ್ಲಿಸಿರುತ್ತಾರೆ. ಆದರೆ ನಾನು ವೈಯುಕ್ತಿಕವಾಗಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಈ ಪ್ರಕರಣದಲ್ಲಿ 2, 4, 6 ಮತ್ತು 7 ನೇ ಪ್ರತಿವಾದಿಗಳು ತಕರಾರುಗಳನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹನೀಫಾಬೀ ರವರು ದಾವಾ ಸ್ವತ್ತಿನಲ್ಲಿಯೇ ತೀರಿಕೊಂಡಿರುತ್ತಾರೆ.

1 ನೇ ಪ್ರತಿವಾದಿ ಹನೀಫಾಬೀ ಅವರು ತೀರಿಕೊಳ್ಳುವ ಸಮಯದವರೆಗೂ ನನ್ನ ಜೊತೆ ಒಳ್ಳೆಯ ಬಾಂದವ್ಯವನ್ನು ಹೊಂದಿದ್ದರು. 2 ನೇ ಪ್ರತಿವಾದಿ ಶರೀಫಾಬೀ ರವರ ಜೊತೆ ನನಗೆ ಒಳ್ಳೆಯ ಬಾಂಧವ್ಯ ಇರುತ್ತದೆ. ಅದೇ ರೀತಿ 4,6 ಮತ್ತು 7 ನೇ ಪ್ರತಿವಾದಿಗಳ ಜೊತೆಯೂ ಸಹ ನನಗೆ ಒಳ್ಳೆಯ ಬಾಂಧವ್ಯ ಇರುತ್ತದೆ. 2,4,6 ಮತ್ತು 7 ನೇ ಪ್ರತಿವಾದಿಗಳು ಈ ದಾವೆಯಲ್ಲಿ ಇತರೆ ನ್ಯಾಯವಾದಿಗಳನ್ನು ನೇಮಕ ಮಾಡಿ ಬೇರೆಯೇ ಪ್ರತಿವಾದಿ ಪತ್ರಗಳನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯು ಶೃಂಗೇರಿ ತಾ. ಶೃಂಗೇರಿ ಗ್ರಾಮದಲ್ಲಿಯೇ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಉದ್ದ 120 ಅಡಿ ಮತ್ತು ಅಗಲ 70 ಅಡಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ದಾವಾ ಆಸ್ತಿಯ ವಿಸ್ತೀರ್ಣ ನಿಖರವಾಗಿ ಎಷ್ಟು ಇರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಇರುವ ಮನೆಯ ವಿಸ್ತೀರ್ಣ 90 ಅಡಿ ಉದ್ದ ಹಾಗೂ 70 ಅಡಿ ಅಗಲ ವಾಗಿರುತ್ತದೆ ಎಂದರೆ ಸಾಕ್ಷಿಯು ಅದರ ವಿಸ್ತೀರ್ಣವು ಸಹ ನನಗೆ ನಿಖರವಾಗಿ ಗೊತ್ತಿಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಎದುರು ಭಾಗದಲ್ಲಿ ಸರ್ಕಾರಿ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸರ್ಕಾರಿ ರಸ್ತೆಯು ದಾವಾ ಆಸ್ತಿಯ ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಹಿಂಭಾಗದಲ್ಲಿ ತಾಲ್ಲೂಕು ಪಂಚಾಯಿತಿಯ ಕಟ್ಟಡ ಇರುವ ಗುಡ್ಡ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸದರಿ ಕಟ್ಟಡವು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ತಾಲ್ಲೂಕು ಪಂಚಾಯಿತಿಯ ಕಟ್ಟಡವು ಒಂದು ಗುಡ್ಡದ ಮೇಲೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಒಂದು ದಿಕ್ಕಿಗೆ ಅಲಾಬಕ್ಷ್ ರವರ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಮನೆಯ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಅಲಾ ಬಕ್ಷ್ ರವರಿಗೆ ಸೇರಿದ ಮನೆ ನನಗೆ ಮಾಹಿತಿ ಇದ್ದಾಗಿನಿಂದಲೂ ಅವರ ಹೆಸರಿನಲ್ಲಿಯೇ ಇರುತ್ತದೆ. ಅಲಾ ಬಕ್ಷ್ ರವರಿಗೆ ಸೇರಿದ ಮನೆ ಮೊದಲು ಖಾಸಿಂ ಸಾಬ್ ರವರ ಹೆಸರಿನಲ್ಲಿ ಇದ್ದು, ಅದನ್ನು ಅಲಾ ಬಕ್ಷ್ ರವರು ಖರೀದಿ ಮಾಡಿರುವ ಆಸ್ತಿ ಆಗಿರುತ್ತದೆ ಮತ್ತು ಈ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಒಂದು ಪಕ್ಕದಲ್ಲಿ ಜಯಚಂದ್ರ ಎಂಬುವವರ ಗ್ಯಾರೇಜ್ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ದಾವಾ ಆಸ್ತಿಯ ಹಿಂಭಾಗದಲ್ಲಿ ಜಯಚಂದ್ರ ರವರಿಗೆ ಸೇರಿದ ಖಾಲಿ ನಿವೇಶನ ಇರುತ್ತದೆ ಎಂದು ನುಡಿದಿರುತ್ತಾರೆ. ಈ ಹಿಂದೆ ಜಯಚಂದ್ರ ರವರ ಖಾಲಿ ನಿವೇಶನದಲ್ಲಿ ಒಂದು ವೆಲ್ಡಿಂಗ್ ಶಾಪ್ ಇತ್ತು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

5. ನಿಡಿ-7 ದಾಖಲೆಯಲ್ಲಿ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ನಮೂದಿಸಿರುವ ಚೆಕ್ ಬಂಧಿಯು ಯಾವುದರ ಆಧಾರದ ಮೇಲೆ ನಮೂದಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಿಂದ 3 ಮನೆಗಳನ್ನು ದಾಟಿದರೆ ಶೃಂಗೇರಿಯ ವೆಲ್ ಕಮ್ ಗೇಟ್ ಬಳಿ ಇರುವ ಮಸೀದಿಯು ಇರುತ್ತದೆ ಎಂದರೆ ಸರಿ. ಸದರಿ ಮಸೀದಿಯು ಶೃಂಗೇರಿಯ ಭಾರತೀ ಬೀದಿಯ ಒಂದು ಭಾಗವಾಗಿರುತ್ತದೆ ಎಂದರೆ ಸರಿ. ಶೃಂಗೇರಿಯ ವೆಲ್ ಕಮ್ ಗೇಟ್ ನಿಂದ ದಾವಾ ಸ್ವತ್ತು 500 ಮೀಟರ್ ಅಡಿ ಅಂತರದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ 1(ಬಿ) ರವರ ವಾಸದ ಮನೆ ದಾವಾ ಆಸ್ತಿಯಿಂದ ಸುಮಾರು ದೂರದಲ್ಲಿ ಬರುತ್ತದೆ. ನಿಡಿ-22 ಫೋಟೋದಲ್ಲಿ ಕಾಣುವ ಮನೆಯು 50-60 ವರ್ಷಗಳಿಗಿಂತ ಹಳೆಯ ಮನೆಯು ಆಗಿರಬಹುದು ಎಂದರೆ ಸಾಕ್ಷಿಯು ಅದಕ್ಕಿಂತ ಹಳೆಯ ಮನೆ ಆಗಿರಬಹುದು ಎಂದು ನುಡಿಯುತ್ತಾರೆ. ನಿಡಿ-22 ಫೋಟೋದಲ್ಲಿ ಕಾಣುವ ಮನೆಯು ಕುಲುಸುಂಬಿ ರವರು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಮನೆಯನ್ನು ಇಬ್ರಾಹಿಂ ಸಾಹೇಬ್ ರವರು ನಿರ್ಮಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮನೆಯನ್ನು ಇಬ್ರಾಹಿಂ ಸಾಹೇಬ್ ರವರು ನಿರ್ಮಿಸಿರುತ್ತಾರೆ ಎಂದು ನನಗೆ ಇಬ್ರಾಹಿಂ ಸಾಹೇಬ್ ರವರ ಹೆಂಡತಿ ಹನೀಫಾಬೀ ರವರು ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧ ಪಟ್ಟ ಖಾತೆಯು ಇಬ್ರಾಹಿಂ ಸಾಹೇಬ್ ರವರ ಹೆಸರಿಗೆ ಯಾವ ದಾಖಲೆಯ ಆಧಾರದ ಮೇಲೆ ಬದಲಾವಣೆ ಆಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸದರಿಯವರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿದ್ದು, ಅದರಂತೆ ಅಸೆಸ್ ಮೆಂಟ್ ಹಾಕಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಅಸೆಸ್ ಮೆಂಟ್ ಅನ್ನು ಇಬ್ರಾಹಿಂ ಸಾಹೇಬ್ ರವರ ಹೆಸರಿಗೆ ಯಾವ ದಿನಾಂಕದಂದು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಅದರ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ.

6. ದಾವಾ ಆಸ್ತಿಯ ಖಾತೆಯು ಇಬ್ರಾಹಿಂ ಸಾಹೇಬ್ ರವರ ಹೆಸರಿಗೆ ಬದಲಾಗುವ ಪೂರ್ವದಲ್ಲಿ ಕುಲುಸುಂಬಿ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಇಬ್ರಾಹಿಂ ಸಾಹೇಬ್ ರವರು ಕುಲುಸುಂಬಿ ರವರ ಮೊದಲನೇ ಮಗ ಎಂದರೆ ಸಾಕ್ಷಿಯು ಇಬ್ರಾಹಿಂ ಸಾಹೇಬ್ ರವರು ಕುಲುಸುಂಬಿ ರವರು ಒಬ್ಬನೇ ಮಗ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕುಲುಸುಂಬಿ ರವರಿಗೆ ಮಹಮದ್ ಯೂಸುಫ್ ಮತ್ತು ಮಹಮದ್ ಮಸ್ತಾನ್ ಎನ್ನುವವರು ಸಹ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ಕುಲುಸುಂಬಿ ರವರ ಮೊದಲನೇ ಪತಿ ಇಮಾಮ್ ಸಾಬ್ ಎಂದರೆ ಸಾಕ್ಷಿಯು ಕುಲುಸುಂಬಿ ರವರಿಗೆ ಇಮಾಮ್ ಸಾಬ್ ರವರು ಒಬ್ಬರೇ ಪತಿ ಆಗಿರುತ್ತಾರೆ ಎಂದು ನುಡಿದಿರುತ್ತಾರೆ.

7.ಇಮಾಮ್ ಸಾಬ್ ರವರು ತೀರಿಕೊಂಡ ನಂತರದಲ್ಲಿ ಕುಲುಸುಂಬಿ ರವರು ಪೀರು ಸಾಬ್ ರವರನ್ನು ಮದುವೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಮದ್ ಯೂಸುಫ್ ಮತ್ತು ಮಹಮದ್ ಮಸ್ತಾನ್ ರವರು ಪೀರು ಸಾಬ್ ಹಾಗೂ ಕುಲುಸುಂಬಿ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ಇಮಾಮ್ ಸಾಬ್ ರವರು ನನ್ನ ಅಜ್ಜಿ ಹನೀಫಾಬೀ ರವರು ತೀರಿಕೊಳ್ಳುವ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. 1974 ರಲ್ಲಿ ನನಗೆ ತಿಳಿದಂತೆ ಕುಲುಸುಂಬಿ ರವರು ಯಾವುದೇ ಮರಣ ಶಾಸನ ಪತ್ರವನ್ನು ಬರೆದಿರುವುದಿಲ್ಲ. 1974 ರಲ್ಲಿ ಕುಲುಸುಂಬಿ ರವರು ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದು ನಾನು ನನ್ನ ವಕೀಲರಿಗೆ ತಿಳಿಸಿರುವುದಿಲ್ಲ.

8. ನಾನು ಹೊಸದಾಗಿ ಯಾವುದೇ ಮನೆಯನ್ನು ನಿರ್ಮಿಸಿರುವುದಿಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯ ಸಂಖ್ಯೆ 15 ಕ್ಕೆ ನನ್ನ ತಾಯಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾವು ಪಂಚಾಯತ್ ನಿಂದ ಕೆಲವು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕೆಂದು ಕೋರಿದ್ದು, ಅದರಲ್ಲಿ ಕಾಣಿಸಿರುವ ದಾಖಲಾತಿಗಳ ಪ್ರತಿಗಳು ನಮ್ಮ ಬಳಿ ಇರುತ್ತವೆ. ನಿಡಿ-22 ಪೋಟೋದಲ್ಲಿ ಕಾಣುವ ಮನೆಯನ್ನು ಇಮಾಮ್ ಸಾಬ್ ರವರು ಕಟ್ಟಿರುತ್ತಾರೆ. ಸದರಿ ಮನೆಯನ್ನು ಇಮಾಮ್ ಸಾಬ್ ರವರು ಕಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಮಾಮ್ ಸಾಬ್ ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಕುಲುಸುಂಬಿ ರವರು ಎಲ್ಲಿ, ಯಾವಾಗ ಮತ್ತು ಯಾವ ಸ್ಥಳದಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು 1977 ರಲ್ಲಿ ತೀರಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಡಿ-15 ರಲ್ಲಿ ಆಗಿರುವ ಅವಾರ್ಡ್ ನ ನಂತರದಲ್ಲಿ ಹನೀಫಾಬೀ ರವರಿಗೆ ಕೇವಲ ನೋಟೀಸು ಬಂದಿರುತ್ತದೆ, ಆದರೆ ಅದರಲ್ಲಿಕಾಣುವ ರೂಪಾಯಿ 77,843/- ರೂ. ಇನ್ನೂ ಸಂದಾಯ ಆಗಿರುವುದಿಲ್ಲ. ನಿಡಿ-20 ಕ್ಕೆ ಸಂಬಂಧ ಪಟ್ಟ ಅರ್ಜಿಯನ್ನು ನಾನು ಈ ದಾವೆ ನಡೆಯುತ್ತಿರುವ ಸಮಯದಲ್ಲಿ ನೀಡಿರುತ್ತೇನೆ ಎಂದರೆ ಸರಿ. ನಿಡಿ-20 ಕ್ಕೆ ಸಂಬಂಧ ಪಟ್ಟ ಅರ್ಜಿಯನ್ನು ನಾನು ನಮೂನೆ -94(ಸಿ) ರಂತೆ ಸಲ್ಲಿಸಿರುತ್ತೇನೆ. ಶೃಂಗೇರಿ ಗ್ರಾಮದ ಸರ್ವೆ ನಂ. 223 ರಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಸರ್ಕಾರಿ ಜಾಗ ಇರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಿಡಿ-7 ರಲ್ಲಿ ದಾವಾ ಆಸ್ತಿಯು ಶೃಂಗೇರಿ ಗ್ರಾಮದ ಸ ನಂ. 223 ರಲ್ಲಿ ಬರುತ್ತದೆ ಎಂದು ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ-7 ರಲ್ಲಿ ದಾವಾ ಆಸ್ತಿಯು ಬೇರೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದೂ ಸಹ ನಮೂದು ಇರುವುದಿಲ್ಲ. ದಾವಾ ಸ್ವತ್ತು ಸ ನಂ. 223 ರಲ್ಲಿ ಬರುವುದೇ ಇಲ್ಲ ಮತ್ತು ಸ ನಂ. 223 ರಲ್ಲಿ ಸರ್ಕಾರಕ್ಕೆ ಸಂಬಂಧ ಪಟ್ಟ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಸ ನಂ. 223 ರಲ್ಲಿ ನಾನು ಸರ್ಕಾರದ ಆಸ್ತಿಯನ್ನು ಒತ್ತುವರಿ-

ಮಾಡಿಕೊಂಡಿರುತ್ತೇನೆ ಎಂದು ಪ್ರತಿಪಾದನೆ ಮಾಡುವುದಕ್ಕಾಗಲೀ ಹಾಗೂ ನಮೂನೆ 94(ಸಿ) ರಡಿಯಲ್ಲಿ ಮಂಜೂರಾತಿ ಕೋರುವುದಕ್ಕಾಗಲೀ ಅವಕಾಶವೇ ಇರುವುದಿಲ್ಲ ಎಂದರೆ ಸರಿಯಲ್ಲ.

9. 2015 ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಹನೀಫಾಬೀ ರವರು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾಗೇಶ್ ಪತ್ರಿಕೆಯಲ್ಲಿ ನಿಪಿ -5(ಎ) ರಂತೆ ವಾದಿ ಪತ್ರಿಕಾ ಪ್ರಕಟಣೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ದಾವಾ ಆಸ್ತಿ ಮನೆ ಹೊರತು ಪಡಿಸಿ ನಮಗೆ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗೆ 1/3 ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ಹನೀಫಾಬೀ ಮತ್ತು ಇತರರನ್ನು ದಾವಾ ಆಸ್ತಿಯನ್ನು ಪಾಲು ಮಾಡಿ ತನಗೆ ಬರಬೇಕಾದ ಭಾಗವನ್ನು ನೀಡುವಂತೆ 2015 ರಲ್ಲಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ವಾದಿ ಪಾಲು ಕೇಳಿದ ಸಮಯದಲ್ಲಿ ದಾವಾ ಆಸ್ತಿಯನ್ನು ನಾವು ಅಂದರೆ ಪ್ರತಿವಾದಿಗಳು ಮಾರಾಟ ಮಾಡಲು ತಯಾರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ ವಾದಿಯು ನಿಪಿ-5 ರಂತೆ ಪತ್ರಿಕಾ ಪ್ರಕಟಣೆಯನ್ನು ನೀಡಿ ನಂತರ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

10. ಕುಲುಸುಂಬಿ ರವರು ತೀರಿಕೊಂಡ ನಂತರದಲ್ಲಿ ವಾದಿ/ಮಹಮದ್ ಯೂಸುಫ್ ಮತ್ತು ಅವರ ಸಹೋದರ ಮಹಮದ್ ಮಸ್ತಾನ್ ರವರಿಗೆ ತಿಳಿಸದೆ ಇಬ್ರಾಹಿಂ ಸಾಹೇಬ್ ರವರು ದಾವಾ ಆಸ್ತಿಯ ಖಾತೆಯನ್ನು ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಹಕ್ಕು ಇದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ::**

**(ದಿನಾಂಕ:01-08-24 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂ: ಶೃಂಗೇರಿ**